# ಅಂಚೆ ಮತ್ತು ತೆರಪಿನ ಶಿಕ್ಷಣ

## ದ್ವಿತೀಯ ಬಿ.ಎ./ಬಿ.ಎಸ್ಸಿ., ಪದವಿ ಪರೀಕ್ಷೆ,

ಆಗಸ್ಟ್/ ಸೆಪ್ಟೆಂಬರ್ 2010

**ಕನ್ನಡ ಭಾಷಾ ಪತ್ರಿಕೆ - ೨**

**(ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ - ೨, ತುಘಲಕ್, ಆಯ್ದ ಸಣ್ಣ ಕಥೆಗಳು, ದೇವರು)**

**(ಹೊಸಬರಿಗೆ)**

ಅವಧಿ : *3* ಗಂಟೆಗಳು.] [ಅಂಕಗಳು: *80*

1. **ಒಂದರ** ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. 7 ಅಂಕಗಳು

೧) ಅರಸನ ಕೆಲಬಲದವರ್ಗಳ್
ಪರಸಿರೆ ಪರಸಿರೆ ನೃಪೇಂದ್ರನಂ ನೀವೆನೆ ಮಂ
ದರಧೀರನಭಯರುಚಿ ನೃಪ
ವರ ನಿರ್ಮಲಧರ್ಮದಿಂದೆ ಪಾಲಿಸು ಧರೆಯಂ

೨) ರತ್ನಸಿಂಹ, ಇಷ್ಟೇನು ಗಡಿಬಿಡಿಯಿಂದ ನಮಗೇನು ತಿಳಿಸದೆ ಬಂದಿರಿ ? ಇಲ್ಲಿ ನಾವೆಲ್ಲ ಬೀದಿಗಳನ್ನು ಸಿಂಗರಿಸಿ ನಿಮ್ಮೆಲ್ಲರನ್ನು ಸ್ವಾಗತಿಸುವುದಕ್ಕೆ ಉತ್ಸುಕರಾಗಿದ್ದೆವು. ಸುಲ್ತಾನರು ಬರುವ ಮೊದಲೇ ಏಕೆ ಹೇಳಿ ಕಳಿಸಲಿಲ್ಲ ?

ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ. 4 ಅಂಕಗಳು

ದೂರ್ಜಟಿ, ಸೂಳ್, ಶಿಖಿ, ತೆಂಕವಂಕ, ತಳಾರ, ದರ್ಪಣ, ದೀಪ್ತಿ, ಬತ್ತಾಯ, ತರಣಿ, ನನ್ನಿ, ವಸುಧೆ, ಜಿಹ್ವೆ.

ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ. 2×2=4 ಅಂಕಗಳು

ಸಂಜಯ, ಚಂಡಕರ್ಮ, ಮಲತಾಯಿ

2. **ಐದಕ್ಕೆ** ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ. 3×5=15 ಅಂಕಗಳು

೧) ಗಾಂಗೇಯ ಪೇಳ್ವದೊಂದು ತೆರದಿಂ ನೀಂ ಕಾದು ದುರ್ಯೋಧನಾ.

೨) ಪಗೆವರ ನಿಟ್ಟೆಲ್ವಂ ಮುರಿವೊಡೆನೆಗೆ ಪಟ್ಟಂಗಟ್ಟಾ.

೩) ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೆ.

೪) ತುಪ್ಪೇರಿದ ದರ್ಪಣದೊಳ್ ಪಜ್ಜಳಿಸಲಾರ್ಪುದೇ ಪ್ರತಿಬಿಂಬಂ

೫) ದೇಹೊಡೆಯ ನಾನಿರಲು ಮಾಡಿದವನಂ ಕೇಳ್ವ ಸಾಹಸವ ನೋಡೆಂದು

೬) ಅಂಗಡಿಗಳನ್ನೆ ಹೂಡಿ ವ್ಯಂಗ್ಯ ಮಾತುಗಳಾಡಿ !

೭) ಆತಂ ಕರಂ ಸಾದು

೮) ನೂರಾರು ಕಾಯಿಲೆಗಳ ಹುತ್ತವಾಗಿದೆ ನನ್ನ ರಾಜ್ಯ

3. ಅ) **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ಭೀಷ್ಮರಿಗೆ ಪಟ್ಟಕಟ್ಟಿದಾಗ ಕರ್ಣನು ವಿರೋಧಿಸಿದ್ದು ಏಕೆ ? ವಿವೇಚಿಸಿ.

೨) ಕನಕದಾಸರು ಸಮಾಜವನ್ನು ವಿಡಂಬಿಸುವ ಬಗೆಯನ್ನು ವಿವರಿಸಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ. 5 ಅಂಕಗಳು

೧) ಬಸವಣ್ಣನವರ ವಚನಗಳಲ್ಲಿಯ ಆಧ್ಯಾತ್ಮಿಕ ಹಾಗೂ ಸಾಮಾಜಿಕ ವಿಚಾರಗಳನ್ನು ಕುರಿತು ಬರೆಯಿರಿ.

೨) ದಾಸಸಾಹಿತ್ಯಕ್ಕೆ ಪುರಂದರ ದಾಸರ ಕೊಡುಗೆಯೇನು ವಿವೇಚಿಸಿ.

4. ಅ) **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ಮಹಮ್ಮದನ ಶಾಂತಿ - ಹಿಂಸೆಯ ದ್ವಂದ್ವದ ವ್ಯಕ್ತಿತ್ವವನ್ನು ನಾಟಕಕಾರರು ಅಭಿವ್ಯಕ್ತಿಸಿರುವ ಬಗೆ ಹೇಗೆ ? ವಿವರಿಸಿ.

೨) ಶಿಹಾಬುದ್ದೀನನ ಪಾತ್ರ ಪರಿಚಯ ಮಾಡಿಕೊಡಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ. 5 ಅಂಕಗಳು

೧) ಶೇಖ್ ಇಮಾಮುದ್ದೀನ್

೨) ಝಿಯಾಉದ್ದೀನ ಬರನಿ

5. **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ಕಾಣಿಯ ಬದುಕಿನ ದುರಂತಕ್ಕೆ ಕಾರಣಗಳೇನು ? ವಿವರಿಸಿ.

೨) ಅಮಾಸ ಕಥೆಯ ಸ್ವಾರಸ್ಯವನ್ನು ಕುರಿತು ಬರೆಯಿರಿ.

6. **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ಮೌಲ್ಯಗಳೆ ದೇವರೆಂದು ಪ್ರತಿಪಾದಿಸುವ ಬಗೆ ಹೇಗೆ ವಿವೇಚಿಸಿ.

೨) ದೇವರು ಎಂದರೇನು ? ಅವನು ಇದ್ದಾನೆಯೇ ? ಅಥವಾ ನಮ್ಮ ಭ್ರಮೆಯೆ? ಚರ್ಚಿಸಿ.